**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:12-11-2020 ರ ನಡವಳಿಗಳು**

**ವಿಷಯದ ಸಂಖ್ಯೆ: 513 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, EODB ಅನುಷ್ಠಾನದ ಪ್ರಗತಿಯ ಕುರಿತು ಪರಿಶೀಲಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ಈ ಕೆಳಗೆ ಕಾಣಿಸಿದಂತೆ ನಿರ್ದೇಶನ ನೀಡಿರುತ್ತಾರೆ;

1. Department for promotion of Industry and Internal Trade (DPIIT), ಕೇಂದ್ರ ಸರ್ಕಾರವು ಬಿಸಿನೆಸ್ ರಿಫಾರ್ಮ್ ಆಕ್ಷನ್ ಪ್ಲಾನ್ (BRAP) 2018-19 ನೇ ಸಾಲಿನಲ್ಲಿ ರಾಜ್ಯ ಮಟ್ಟದಲ್ಲಿ ಅನುಷ್ಠಾನಗೊಳಿಸಲು 80 ಸುಧಾರಣಾ ಅಂಶಗಳನ್ನು (Reforms points) ಗಳನ್ನು ನೀಡಿರುತ್ತದೆ.
2. ದಿನಾಂಕ:27-05-2019ರಂದು ಸುಧಾರಣಾ ಅಂಶ-14ನ್ನು ಅನುಷ್ಠಾನಗೊಳಿಸುವ ಕುರಿತು ನಡೆದ ಸಭೆಯಲ್ಲಿ ಸುಧಾರಣಾ ಅಂಶ-14ನ್ನು ಅನುಷ್ಠಾನಗೊಳಿಸಲು ಆಸ್ತಿಯ ನೋಂದಣಿ ಪ್ರಕ್ರಿಯೆ ಪೂರ್ಣವಾದ ಮೇಲೆ ಆಸ್ತಿ ಮಾಲೀಕತ್ವದ ಹಕ್ಕು ವರ್ಗಾವಣೆ ಸ್ವಯಂಚಾಲಿತವಾಗಿ ಜಾರಿಯಾಗಬೇಕಿದ್ದು, ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು/ ಮಹಾನಗರ ಪಾಲಿಕೆಗಳು/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾಹಿತಿಯು ರವಾನೆಯಾಗಬೇಕಿರುತ್ತದೆ. ಆಸ್ತಿಯ ಮಾಲೀಕತ್ವ ಹಕ್ಕು ವರ್ಗಾವಣೆಗೆ ಪ್ರತ್ಯೇಕವಾಗಿ ಅರ್ಜಿ ನಿರ್ವಹಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ಒಮ್ಮೆ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಜಾರಿಯಾದ ಮೇಲೆ ಮತ್ತು ಪೂರ್ಣಗೊಂಡ ನಂತರ ಆಸ್ತಿಯನ್ನು ವರ್ಗಾವಣೆ ಮಾಡುವವರಿಗೆ ಮತ್ತು ವರ್ಗಾವಣೆಯಾಗಿರುವವರಿಗೆ ಕಿರು ಸಂದೇಶ (SMS)/ ಇ-ಮೇಲ್ ಮೂಲಕ ಮಾಹಿತಿಯು ರವಾನೆಯಾಗಬೇಕು.
3. ಇದಕ್ಕೆ ಸಂಬಂಧಿಸಿದಂತೆ ಆಸ್ತಿಯ ನೋಂದಣಿಯಾದ ಕೂಡಲೆ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆಯು ಆರಂಭವಾಗುವಂತೆ ನಗರಾಭಿವೃದ್ಧಿ ಇಲಾಖೆಯು ಆದೇಶ ಹೊರಡಿಸುವ ಅವಶ್ಯಕತೆ ಇರುತ್ತದೆ. ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಫೀ/ ಶುಲ್ಕವನ್ನು ಸಂಗ್ರಹಿಸುವುದರ ಜೊತೆಗೆ ಆಸ್ತಿಗಳ ಮಾಲೀಕತ್ವ ಹಕ್ಕು ವರ್ಗಾವಣೆ ಶುಲ್ಕವನ್ನು ಕೂಡ ಸಂಗ್ರಹಿಸಬೇಕಿರುತ್ತದೆ. ಒಮ್ಮೆ ನೋಂದಣಿ ಪ್ರಕ್ರಿಯೆ ಪೂರ್ಣವಾದ ನಂತರ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ/ ಮಹಾನಗರ ಪಾಲಿಕೆಗಳಿಗೆ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾಹಿತಿಯು ಸ್ವಯಂಚಾಲಿತವಾಗಿ ರವಾನೆಯಾಗಬೇಕಿರುತ್ತದೆ ಹಾಗೂ ಎಸ್.ಎಂ.ಎಸ್/ ಇ-ಮೇಲ್ ಮುಖಾಂತರ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಆರಂಭಗೊಂಡಿರುವ ಬಗ್ಗೆ ಆಸ್ತಿಯನ್ನು ವರ್ಗಾವಣೆ ಮಾಡಿರುವವರಿಗೆ ಮತ್ತು ಆಸ್ತಿಯನ್ನು ವರ್ಗಾವಣೆ ಮಾಡಿಸಿಕೊಂಡಿರುವವರಿಗೆ ರವಾನೆಯಾಗಬೇಕಿರುತ್ತದೆ.

ಮೇಲ್ಕಂಡ ಸೂಚನೆಗಳನ್ವಯ ಪರಿಶೀಲಿಸಿ ಈ ಕೆಳಗಿನ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 13 ಜಿಇಎಲ್ 2019, ದಿನಾಂಕ:12-06-2019**

ಮೇಲೆ ಓದಲಾದ ಉಪ ಸಮಿತಿಯ ರಚನೆಯ ನಡವಳಿಗಳನ್ನು ಉಲ್ಲೇಖಿಸಿ ಸುಧಾರಣಾ ಅಂಶ-14ನ್ನು ಅಳವಡಿಸಲು ಅಂದರೆ;

ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆಯನ್ನು ನೋಂದಣಿ ಪ್ರಕಿಯೆಯೊಂದಿಗೆ ಜೋಡಣೆ ಮಾಡಿ ಪತ್ರವು ನೋಂದಣಿಯಾದ ಕೂಡಲೇ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆಯು ಜಾರಿಯಾಗಲು ಈ ಕೆಳಕಂಡ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದು.

i. ನೋಂದಣಿ ಪ್ರಕ್ರಿಯೆ ಪೂರ್ಣವಾದ ಕೂಡಲೇ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಜಾರಿ ಮಾಡುವ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸ್ವಯಂಚಾಲಿತವಾಗಿ ಮಾಹಿತಿಯು ರವಾನೆಯಾಗುವ ಬಗ್ಗೆ. ಇದು ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಆರಂಭಿಕ ಹಂತವಾಗಿರುತ್ತದೆ.
ii. ಆಸ್ತಿ ವರ್ಗಾವಣೆ ಮಾಡಿಸಿಕೊಳ್ಳುವವರು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
iii. ಆಸ್ತಿ ವರ್ಗಾವಣೆ ಮಾಡುವವರಿಗೆ/ ಆಸ್ತಿ ವರ್ಗಾವಣೆಯಾಗಿರುವವರಿಗೆ ಎಸ್.ಎಂ.ಎಸ್/ ಇ-ಮೇಲ್ ಮುಖಾಂತರ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಆರಂಭಗೊಂಡಿರುವ ಬಗ್ಗೆ ಮಾಹಿತಿಯು ಕಡ್ಡಾಯವಾಗಿ ರವಾನೆಯಾಗುವ ಬಗ್ಗೆ.

ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆ ಸುಗಮಗೊಳಿಸಲು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆಯು ಪೂರ್ಣವಾದ ಕೂಡಲೇ ಕಾವೇರಿ ತಂತ್ರಾಂಶದ ಮೂಲಕ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಮಾಡುವ ಪ್ರಾಧಿಕಾರಗಳಿಗೆ ಸ್ವಯಂಚಾಲಿತವಾಗಿ ಮಾಹಿತಿಯು ರವಾನೆಯಾಗುವಂತೆ ಈ ಮೂಲಕ ಆದೇಶಿಸಿದೆ. ಇದು ನಗರ ಸ್ಥಳೀಯ ಸಂಸ್ಥೆಗಳಿಗೆ/ ಮಹಾನಗರ ಪಾಲಿಕೆಗಳಿಗೆ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡಲು ನೋಟೀಸ್ ಎಂದು ಪರಿಗಣಿಸಲು ಸೂಚಿಸಿದೆ.

ಮುಂದುವರೆದು ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣಾ ಶುಲ್ಕವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಆಸ್ತಿಗಳ ನೋಂದಣಿ ಸಮಯದಲ್ಲಿ ಸಂಗ್ರಹಿಸುವುದು. ಸದರಿ ಶುಲ್ಕವನ್ನು 30 ದಿನಗಳೊಳಗಾಗಿ ನಗರ ಸ್ಥಳೀಯ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುತ್ತದೆ. ಮುಂದುವರೆದು, ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಮಾಡಲು ಪ್ರತ್ಯೇಕವಾದ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಒಮ್ಮೆ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಪೂರ್ಣವಾದ ನಂತರ ಆಸ್ತಿ ವರ್ಗಾವಣೆ ಮಾಡುವವರಿಗೆ/ ಆಸ್ತಿ ವರ್ಗಾವಣೆಯಾಗಿರುವವರಿಗೆ ಎಸ್.ಎಂ.ಎಸ್/ ಇ-ಮೇಲ್ ಮುಖಾಂತರ ಮಾಹಿತಿಯನ್ನು ನೀಡುವುದು.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಉಪನೋಂದಣಾಧಿಕಾರಿಗಳ ಕಛೇರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ಮಹಾನಗರ ಪಾಲಿಕೆಗಳು/ ನಗರ ಸ್ಥಳೀಯ ಸಂಸ್ಥೆಗಳು ಮೇಲಿನ ಪ್ರಕ್ರಿಯೆಗಳನ್ನು ಅನುಸರಿಸಲು ಸೂಚಿಸಲಾಗಿದೆ.

ಮೇಲ್ಕಂಡ ಸರ್ಕಾರದ ಆದೇಶವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ದಾಖಲಾತಿ ಮಾಡಿಕೊಳ್ಳಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-11-2020ರ ಟಿಪ್ಪಣಿಯನ್ನು ಟಿಪ್ಪಣಿ.

<u>ತೀರ್ಮಾನ :</u> **ಟಿಪ್ಪಣಿಯನ್ನು ಅವಲೋಕಿಸಲಾಗಿದ್ದು, ಸಂಖ್ಯೆ:ನಅಇ 13 ಜಿ.ಇ.ಎಲ್. 2019, ದಿನಾಂಕ:12-06-2019ರ ಸರ್ಕಾರದ ಆದೇಶವನ್ನು ದಾಖಲಾತಿ ಮಾಡಿಕೊಳ್ಳಲು ಮಂಡಿಸಿರುವ ಆಯುಕ್ತರವರ ದಿನಾಂಕ:12-11-2020ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು